**4**

# ಪವಿತ್ರಾತ್ಮನಿಂದಾಗುವ ಸಂತೈಸುವಿಕೆ

## (ಯೋಹಾನ 14)

*"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವೆನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ; ಹೇಗಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ, ಮತ್ತು ನಿಮ್ಮೊಳಗೆ ಇರುವನು. ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ" (ವಚನಗಳು 16-18).*

ಯೇಸು ತಾನು ಹೊರಟು ಹೋಗುತ್ತೇನೆಂದು ತನ್ನ ಅಪೊಸ್ತಲರಿಗೆ ತಿಳಿಸಿದ ನಂತರ, ತಕ್ಷಣವೇ ಪವಿತ್ರಾತ್ಮನನ್ನು ಕಳುಹಿಸುವೆನೆಂದು ವಾಗ್ದಾನ ಮಾಡಿದನು. ಮೇಲುಪ್ಪರಿಗೆಯಲ್ಲಿ, ಪವಿತ್ರಾತ್ಮ ವಾಗ್ದಾನದ ಮಹತ್ವದ ಸಂದೇಶವನ್ನು ಯೇಸು ನೀಡಿದನು.

ಪುನರುತ್ಥಾನದ ನಂತರ ಯೇಸು ನಿರ್ಗಮನವಾದನು. ಹತ್ತು ದಿನಗಳಾದ ನಂತರ, ಪಂಚಾಶತ್ತಮ ದಿನದಂದು, ದೇವರ ರಾಜ್ಯವು ಬಂದಿತು. ಆ ಐತಿಹಾಸಿಕ ದಿನದಂದು ಅಪೊಸ್ತಲರು ಪವಿತ್ರಾತ್ಮ ದಾನವನ್ನು ಹೊಂದಿ ಅಭಿಷೇಕ ಹೊಂದಿದರು. ತಕ್ಷಣವೇ ಅಪೊಸ್ತಲರು ದೇವರ ರಾಜ್ಯದ ಕೆಲಸವನ್ನು ವೃದ್ಧಿಗೊಳಿಸಿದರು. ಈ ವಿಚಾರವನ್ನು ಯೇಸು ಈ ಹಿಂದೆಯೇ ಪ್ರಕಟಪಡಿಸಿದ್ದನು. "ನಿಮಗೆ ಸತ್ಯವಾಗಿ ಹೇಳುತ್ತೇನೆ ಹೊಸ ಸೃಷ್ಟಿಯಲ್ಲಿ ಮನುಷ್ಯಕುಮಾರನು ತನ್ನ ಮಹಿಮೆಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ ನನ್ನನ್ನು ಹಿಂಬಾಲಿಸಿರುವ ನೀವು ಸಹ ಹನ್ನೆರಡು ಸಿಂಹಾಸನಗಳಲ್ಲಿ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವಿರಿ" (ಮತ್ತಾಯ 19:28). ನಂತರದಲ್ಲಿ, ಪೌಲನು ದೇವರ ಮನೆಯ ಕುರಿತು, "ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ" ಎಂದು ಬರೆದನು (ಎಫೆಸ 2:20). ಅಪೊಸ್ತಲರ ಈ ಅಗಮ್ಯವಾದ ಕಾರ್ಯಕ್ಕೆ, ದೈವೀಕ ಶಕ್ತಿಯ ಅಗತ್ಯತೆಯಿತ್ತು. ಪ್ರೇರಿತವಾದ ಹಾಗೂ ಆತನ ಅನ್ಯೋನ್ಯತೆಯ ಮೂಲಕ ಉದ್ದೇಶವು ಈಡೇರಿತು.

ಯೇಸು ನೀಡಿದ ಈ ವಾಗ್ದಾನವನ್ನು ಅಪೊಸ್ತಲರು ಹೇಗೆ ಅರ್ಥೈಯಿಸಿಕೊಂಡರು? ನಾವುಗಳು ಹೇಗೆ ಅರ್ಥೈಸಿಕೊಳ್ಳುತ್ತೇವೆ? ಪವಿತ್ರಾತ್ಮನಿಂದ ಯಾವ ವಿಧವಾದ ಸಂತೈಸುವಿಕೆಯು ದೊರೆಯುತ್ತದೆ?

### ದೈವಿಕ ಸಹಾಯ

*ಮೊದಲನೆಯದಾಗಿ, ಆತನು ದೈವಿಕವಾದ ಸಹಾಯವನ್ನು ನೀಡುವನು.* ಆದ್ದರಿಂದ ಯೇಸು, "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು, ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಕೊಡುವನು" ಅಂದನು (14:16ಎ). ಪವಿತ್ರಾತ್ಮನ ಬರುವಿಕೆಯ ಕುರಿತಾದ ಈ ಸಂಕ್ಷಿಪ್ತ ಚರ್ಚೆಯಲ್ಲಿ "ಸಹಾಯಕನು" ಅಂದರೆ ಪವಿತ್ರಾತ್ಮನೆ ಎಂದು ಎರಡು ಸಾರಿ ಉಲ್ಲೇಖಿಸಲಾಗಿದೆ (14:16, 26). "ಸಹಾಯಕನು" ಅಂದರೆ ಗ್ರೀಕ್ ಭಾಷೆಯಲ್ಲಿ "ಪಾರಾಕ್ಲೇಟನ್" ಅಂದರೆ 1 ಯೋಹಾನ 2:1 ರಲ್ಲಿ ಯೇಸುವಿನ ಕುರಿತು ನೀಡಿರುವ ವಿವರಣೆಯೇ

ಆಗಿರುತ್ತದೆ.

ಪವಿತ್ರಾತ್ಮನನ್ನು ಕುರಿತು ಯೇಸು "ಇನ್ನೊಬ್ಬ ಸಹಾಯಕನು" ಎಂದು ತಿಳಿಸಿರುವನು. ಯೇಸುವಿನ ಸ್ವಭಾವವನ್ನೇ ಹೊಂದಿರುವ ಮತ್ತೊಬ್ಬ ವ್ಯಕ್ತಿ ಎಂಬ ಅರ್ಥವಾಗಿದೆ. ಯೇಸು ನೀಡಿದ ಹಲವಾರು ಮಾರ್ಗದರ್ಶನವನ್ನೇ ಆ ಆತ್ಮನು ನೀಡುವದಕ್ಕಿದ್ದನು.

ಈ ಪವಿತ್ರಾತ್ಮನ ಸಹಾಯವಿಲ್ಲದೆ ಅಪೊಸ್ತಲರು ದೇವರ ಸೇವೆಯನ್ನು ಮಾಡುವ ಸಾಧ್ಯತೆಯಿರಲಿಲ್ಲ. ಪರಲೋಕ ದೇವರ ಸೇವೆಯ ಕಾರ್ಯವು ಗುರುತರವಾಗಿತ್ತು. ದೈವಿಕ ವಾಗಿತ್ತು ಅದು ನಿತ್ಯವಾದ ಕಾರ್ಯವಾಗಿದ್ದರಿಂದ ಮಾನವರ ಶಕ್ತಿಯಿಂದ ನೆರವೇರಿಸಲು ಅಸಾಧ್ಯವಾಗಿತ್ತು. ಯೇಸು ಅಪೊಸ್ತಲರಿಗೆ ನೀಡಿದ ಕೆಲಸವು ಬಹು ಪ್ರಯಾಸದ ಕಾರ್ಯ ವಾಗಿತ್ತು ಎಂದು ಅವರು ತಿಳಿದಿದ್ದರು. ಅವರ ಸಂಗಡ ಕಾರ್ಯನಿರ್ವಹಿಸಲು ಇನ್ನೊಂದು ಬಲವಾದ ಹಸ್ತದ ಅಗತ್ಯವು ಇತ್ತು. ಅವರಿಗೆ ಸಹಾಯ ಮಾಡಲು ದೇವರು ಪವಿತ್ರಾತ್ಮನು ಎಂಬ ಸಹಾಯಕನನ್ನು ಅನುಗ್ರಹಿಸಿದನು.

## ದಿವ್ಯ ಸನ್ನಿಧಿ

*ಇದರ ಸಂಗಡ, ಪವಿತ್ರಾತ್ಮನು ಅಪೊಸ್ತಲರಿಗೆ ಸಂತೈಸುವ ಸನ್ನಿಧಿಯನ್ನು ನೀಡುತ್ತಿದ್ದನು:* "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು" (14:16ಎ) ಎಂದು ಯೇಸು ವಾಗ್ದಾನ ಮಾಡಿದನು. ಅಂದರೆ, ಇಂದಿನಿಂದ ಈ ಸಂತೈಸುವಿಕೆಯು ನಿಮ್ಮೊಂದಿಗಿರುವದು ಎಂಬ ಅರ್ಥವಾಗಿದೆ. ಆತನ ಮಾತು ನಿರ್ಧಿಷ್ಟವಾಗಿತ್ತು. "ನಾನು ನಿಮ್ಮನ್ನು ಅನಾಥರನ್ನಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ" (14:18).

ಆತ್ಮನು ಸಹ, ಯೇಸುವಿನಂತೆ ಅವರ ಸಂಗಡಲೇ ಇರುವದಕ್ಕಿದ್ದನು ಯೇಸು ತನ್ನ ಹಿಂಬಾಲಕರಿಗೆ, "ನಿಮ್ಮ ಬಳಿಗೆ ಬರುತ್ತೇನೆ" ಅಂದನು (14:18). ಪರಿಶುದ್ಧತ್ಮಾನಾಗಿ ಅವರ ಸಂಗಡ ಇರುತ್ತೇನೆ ಎಂಬದೇ ಅದರ ಅರ್ಥವಾಗಿದೆ.

ಕಳೆದ ಮೂರು ವರ್ಷಗಳಿಂದ ಅಪೊಸ್ತಲರು, ಯೇಸುವಿನ ದೈಹಿಕ ಸನ್ನಿಧಿಯನ್ನೇ ಅವಲಂಬಿಸಿದ್ದರು. ಕರ್ತನು ಅವರೊಂದಿಗೆ ಇರುವವರೆಗೆ, ಮರಣವೋ ಅವರ ಸಮೀಪಕ್ಕೆ ಸುಳಿಯಲಾರದು ಎಂದು ನಂಬಿದ್ದರು. ಲಾಜರನ್ನು ಯೇಸು ಮರಣದಿಂದ ಎಬ್ಬಿಸಿದ್ದನ್ನು ನೋಡಿದ್ದು. ಗಲಿಲಾಯದ ಸಮುದ್ರವನ್ನು ಆತನು ಶಾಂತಪಡಸಿದ್ದನ್ನು ನೋಡಿದ್ದರು. ದೆವ್ವ ಬಿಡಿಸುವಾಗಲೂ, ಸಾವಿರಾರು ಜನರಿಗೆ ಊಟ ಬಿಡಿಸಿದಾಗಲೂ ಅವರು ಅಲ್ಲಿದ್ದರು. ಯೇಸುವಿನೊಂದಿಗೆ ಇಂಥಾ ವಿಶೇಷವಾದ ಅನುಭವವನ್ನು ಹೊಂದಿದ್ದ ಶಿಷ್ಯರು, ಯೇಸುವಿನ ನಿರ್ಗಮನವನ್ನು ಕೇಳುವಾಗ, ಹೃದಯದಲ್ಲಿ ಆತಂಕಗೊಂಡರು. ಪ್ರಾಯಶಃ ಯೇಸು ಅವರೊಂದಿಗೆ ಇಲ್ಲದೆ ಇರುವಂಥ ಚಿತ್ರಣವನ್ನು ಅವರು ಊಹಿಸಿರಬಹುದು.

## ಪ್ರೇರಿತ ಮಾರ್ಗದರ್ಶನ

*ಮೂರನೆಯದಾಗಿ, ಪವಿತ್ರಾತ್ಮನು ಅವರಿಗೆ ಪ್ರೇರಿತವಾದ ಮಾರ್ಗದರ್ಶನವನ್ನು ನೀಡುವದಕ್ಕಿದ್ದನು.* ಯೇಸು ಆ ಆತ್ಮನನ್ನು ಕುರಿತು "ಸತ್ಯದ ಆತ್ಮನು" (14:17) ಎಂದಿರುವನು. ಯೇಸು ಪುನ, "ಅಂದರೆ ಆ ಸಹಾಯಕನು ಅಂದರೆ ತಂದೆಯು ನನ್ನ ಹೆಸರಿನಲ್ಲಿ ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (14:26) ಅಂದನು. ಪವಿತ್ರಾತ್ಮನ ಸಹಾಯವು ಎರಡು ವಿಧವಾಗಿದೆ. ಅವರು ಕಲಿತದ್ದನು ನೆನಪಿಸುವನು, ಮತ್ತು ಅಗತ್ಯವಿರುವ ಸತ್ಯಗಳನ್ನು ತಿಳಿಸುವನು. ಅವರ ಕರೆಯಂತೆ ಪವಿತ್ರಾತ್ಮನು ಬೋಧಿಸುವದಕ್ಕೂ ಪ್ರಸಂಗಿಸುವದಕ್ಕೂ ಸಹಾಯಿಸುವನು.

ದೇವರಿಂದ ಹೊಂದಿದ ಸತ್ಯಕ್ಕೆ ಇತರೆ ಯಾವುದೇ ಸಂಗತಿಗಳು ಸರಿ ಸಾಟಿಯಾಗಿರುವದಿಲ್ಲ. ಅಪೊಸ್ತಲರಿಗೆ ಈ ನಿಶ್ಚಯಿತ್ವದ ಅಗತ್ಯತೆ ಇತ್ತು ಮತ್ತು ಈ ಅಂಶಗಳ ಅಗತ್ಯತೆ ನಮಗೂ ಉಂಟು. ಪವಿತ್ರಾತ್ಮನು ಪ್ರೇರಿತನಾಗಿ ದೃಢನಿಶ್ಚಯದಿಂದ ಸತ್ಯವನ್ನು ಅವರಿಗೆ ನೀಡಿದನು. ಪ್ರೇರಿತವಾದ ಹಾಗೂ ನಂಬಿಕೆಯಿಂದ ಅಧ್ಯಯನ ಮಾಡಿದ ಬರವಣಿಗೆಯು ಈ ಸತ್ಯವನ್ನು ನಾವುಗಳೂ ಸಹ ಹೊಂದಿರುವೆವು. ನಾವು ದೇವರ ಸತ್ಯದಲ್ಲಿ ನಿಂತುಕೊಳ್ಳುವಾಗ, ನಾವು ಪವಿತ್ರಾತ್ಮನ ಸಂತೈಸುವಿಕೆಯಿಂದ ನಿಲ್ಲುತ್ತೇವೆ.

## ಮುರಿದು ಬೀಳದ ಮುಂದುವರಿಕೆ

*ನಾಲ್ಕನೆಯದಾಗಿ, ಪವಿತ್ರಾತ್ಮನು ಅವರಿಗೆ ಸಂತೈಸುವಿಕೆಯ ಸಂಗಡ, ಮುರಿಯಲಾರದ ಮುಂದುವರಿಕೆಯನ್ನು ನೀಡಿದನು.* ಪವಿತ್ರಾತ್ಮನು ಈಗಾಗಲೇ ಅಪೊಸ್ತಲರಲ್ಲಿ ಕಾರ್ಯ ಮಾಡುತ್ತಿದ್ದನು. ಯೇಸು, "ನೀವು ಆತನನ್ನು ಬಲ್ಲಿರಿ, ಹೇಗಂದರೆ ನಿಮ್ಮ ಬಳಿಯಲ್ಲಿ ವಾಸ ಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು" (14:17ಬಿ) ಅಂದನು. ಆತನು ಯೇಸುವಿನ ಜೀವಿತದಲ್ಲಿ ಕಾರ್ಯ ಸಾಧಿಸಿ ಯೇಸು ಉಪದೇಶ ಮಾಡುವದನ್ನು ಬೋಧಿಸುವದನ್ನು ಮಹತ್ಕಾರ್ಯ ಮಾಡುವದನ್ನು ನೋಡಿದ್ದರು, ಮತ್ತು ಇನ್ನು ಸ್ವಲ್ಪಕಾಲದಲ್ಲಿಯೇ ಆತನು ಅವರ ಮೇಲೆ ಇಳಿದು ಬಂದು, ಕ್ರೈಸ್ತರ ಯುಗದಲ್ಲೆಲ್ಲಾ ಅವರೊಂದಿಗಿರುವನು ಎಂದು ತಿಳಿದಿದ್ದರು (ಅಪೊಸ್ತಲರ ಕೃತ್ಯಗಳು 2:38; 1 ಕೊರಿಂಥ 6:19, 20). ಅಪೊಸ್ತಲರಲ್ಲಿ ಆತ್ಮನ ದೀಕ್ಷಾಸ್ನಾನ ಉಂಟಾದಾಗ ಅವರು ಪವಿತ್ರಾತ್ಮಾದ ದಾನಗಳನ್ನು ಇತರರಿಗೆ ವರ್ಗಾಹಿಸುವವರಿದ್ದರು. ಈ ವರದಾನಗಳು ಸಭೆಗಳನ್ನು ಚೈತನ್ನಗೊಳಿಸುವದಿತ್ತು. ನಂತರದಲ್ಲಿ ತಂದೆಯು ನೀಡುವ ರಕ್ಷಣೆಯ ಸೂಚಕವಾಗಿ ಆತನು ಎಲ್ಲರೊಂದಿಗೆ ಇರುವದಕ್ಕಿದ್ದನು. ಯೇಸು ತಂದೆಯ ಬಲಪಾರ್ಶ್ವರ್ಯದಲ್ಲಿ ಕೂತುಕೊಂಡಾಗ, ಪವಿತ್ರಾತ್ಮನು, ಯೇಸುವಿನ ಅನುಯಾಯಿಗಳ ಹೃದಯದಲ್ಲಿ ಬೀಡು ಬಿಟ್ಟಿದ್ದನು.

## ಮುಕ್ತಾಯ

ಅಪೊಸ್ತಲರನ್ನು ಯೇಸು ತನ್ನ ಮರಣಕ್ಕಾಗಿ ಸಿದ್ಧಮಾಡುವಾಗ, ಅವರಿಗೆ ದೃಢ ಭರವಸವನ್ನು ನೀಡಿದನು. ಅವರಿಗೆ ಸಹಾಯ ಮಾಡುವ, ವೈಯಕ್ತಿಕ ಸನ್ನಿಧಿ ನೀಡುವ, ಪ್ರಕಟನೆಯನ್ನು ನೀಡುವ, ಹಾಗೂ ಮುರಿದು ಹೋಗಲಾರದ ಮುಂದುವರಿಕೆಯನ್ನು ಒದಗಿಸುವ ಆತ್ಮನನ್ನು ಕಳುಹಿಸುವೆನೆಂಬ ವಾಗ್ದಾನವನ್ನು ನೀಡಿದನು. ಆ ವಾಗ್ದಾನವನ್ನು ಪರೋಕ್ಷವಾಗಿ ನಮಗೂ ನೀಡಿರುವನು. ಪರಿಶುದ್ಧಾತ್ಮನು ನಮ್ಮಲ್ಲಿ ನೆಲೆಗೊಂಡು, ತನ್ನ ಪ್ರಕಟನೆಯನ್ನು ತಿಳಿಸುವ ಮೂಲಕ, ನಮ್ಮ ಅಗತ್ಯಗಳನ್ನು ನೀಗಿಸುವನು. ಈ ವಾಗ್ದಾನವು ಕ್ರೈಸ್ತರಿಗಿರುವ ವಿಶೇಷವಾದ ವಾಗ್ದಾದನವಾಗಿದೆ.

---

*"ಪಂಚಾಶತ್ತಮ ದಿನದ ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಪಕ್ಕನೆ ಆಕಾಶದೊಳಗಿಂದ ಒಂದು ಶಬ್ಧವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಮೇಲೆ ಒಂದೊಂದಾಗಿ ಕೂತುಕೊಂಡವು" (ಅಪೊಸ್ತಲರ ಕೃತ್ಯಗಳು 2:1-3).*

*"ಹೀಗಿರಲಾಗಿ ಯುದಾಯ ಗಲಿಲಾಯ ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು ಸಮಾಧಾನಹೊಂದಿತು; ಮತ್ತು ಭಕ್ತಿಯಲ್ಲಿ ಬೆಳೆದು ಕರ್ತನ ಭಯದಲ್ಲಿ ನಡೆದು ಪವಿತ್ರಾತ್ಮನಿಂದ ಪ್ರೋತ್ಸಾಹವನ್ನು ಹೊಂದಿ ಹೆಚ್ಚುತ್ತಾ ಬಂತು" (ಅಪೊಸ್ತಲರ ಕೃತ್ಯಗಳು 9:31).*